***ಓ.ಎಸ್.ನಂ.288/2012***
***ಡಿ.ಡಬ್ಲ್ಯೂ-3***

***<u>ದಿಃ03-01-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಂದುವರಿದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದ.</u>***

ನಾನು ನ್ಯಾಯಾಲಯಕ್ಕೆ ದಿನಾಂಕಃ ***13-05-1992*** ರ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-***2*** ಎಂದು ಗುರುತಿಸಲಾಯಿತು. ಎಂ ಆರ್ ನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-***3*** ಎಂದು ಗುರುತಿಸಲಾಯಿತು. ***13*** ಪಹಣಿಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ-***4*** ರಿಂದ ನಿಡಿ-***16*** ಎಂದು ಗುರುತಿಸಲಾಯಿತು. ಪೋಟೋದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-***17*** ಎಂದು ಗುರುತಿಸಲಾಯಿತು. ದೂರಿನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ-***18*** ಮತ್ತು ನಿಡಿ-***19*** ಎಂದು ಗುರುತಿಸಲಾಯಿತು. ನೋಟೀಸಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-***20*** ಎಂದು

ಗುರುತಿಸಲಾಯಿತು. ಅಂಚೆ ಸ್ವೀಕೃತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-***21*** ಎಂದು ಗುರುತಿಸಲಾಯಿತು.

***<u>ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಲ್ ಪಿ ವಕೀಲರಿಂದಃ</u>***

ನಾವು ನಿಡಿ-***2*** ಕ್ರಯಪತ್ರದ ಪ್ರಕಾರ ***1.12*** ಗುಂಟೆ ಜಮೀನನ್ನು ಖರೀದಿಸಿರುತ್ತೇವೆ. ಸದರಿ ಸ್ವತ್ತಿನ ಸರ್ವೆ ನಂ.***35/3*** ಆಗಿರುತ್ತದೆ. ಸದರಿ ಕ್ರಯಪತ್ರದ ಪ್ರಕಾರ ಸರ್ವೆ ನಂ. ***35/3*** ಕ್ಕೆ ಖಾತೆ ಪಹಣಿ ಆಗಿರುತ್ತದೆ. ಕೈಬರವಣಿಗೆ ಪಹಣಿಯಲ್ಲಿ ಸರ್ವೆ ನಂ.***35/3*** ಎಂದು ***2000*** ದ ಇಸವಿಯವರೆಗೆ ನಮೂದಾಗಿದ್ದು, ನಂತರದಲ್ಲಿ ಗಣಕೀಕೃತ ಪಹಣಿಯಲ್ಲಿ ಸರ್ವೆ ನಂ. ***35/1*** ಎಂದು ತಪ್ಪಾಗಿ

ನಮೂದಾಗಿರುತ್ತದೆ. ನಿಡಿ-*2* ರಲ್ಲಿರುವ ಸ್ವತ್ತಿನ ಚಕ್ಕುಬಂದಿ ನಾನು ನೋಡಿರುವುದಿಲ್ಲ. ಕ್ರಯಪತ್ರದಲ್ಲಿ *1.12* ಗುಂಟೆ ಎಂದು ವಿಸ್ತೀರ್ಣ ನಮೂದಿಸಿದೆ. ನಿಡಿ-*2* ರಂತೆ ನಾವು *1.12* ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಿಡಿ-*2* ರಲ್ಲಿ ಸ್ವತ್ತಿನ ವಿಸ್ತೀರ್ಣ *30* ಇಂಟು *70* ಅಡಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ಸ್ವತ್ತಿನ ಪೂರ್ವಕ್ಕೆಃ ಸೈಟ್ ನಂ. *19,* ಪಶ್ಚಿಮಕ್ಕೆಃ ಸೈಟ್ ನಂ.*21,* ದಕ್ಷಿಣಕ್ಕೆಃ ರಸ್ತೆ, ಉತ್ತರಕ್ಕೆಃ ನಾಗಪ್ಪ ಕಾಲೋನಿ ಎಂದು ನಮೂದಿಸಿದೆ ಎಂದರೆ ಸರಿ. ಸೈಟ್ ನಂ. *19* ಧನಂಜಯರವರಿಗೆ ಸೇರಿರುತ್ತದೆ. ಸೈಟ್ ನಂ.*21* ಮಹೇಶ್ ರವರ ಜಾಗ. ಆ ಇಬ್ಬರು ಸ್ವತ್ತಿನ ಮಧ್ಯೆ *30* ಇಂಟು *70* ಅಳತೆ ಬರುತ್ತದೆ. ಕ್ರಯಪತ್ರದ ಪ್ರಕಾರ ನಮ್ಮ ಸ್ವತ್ತಿನಲ್ಲಿ ಸ್ವಾಧೀನ ಹೊಂದಿರುತ್ತೇವೆ. ಸದರಿ *30* ಇಂಟು *70* ಅಡಿ ಜಾಗದಲ್ಲಿ ಒಂದು ಮನೆ ಮತ್ತು ಶೌಚಾಲಯ ಕಟ್ಟಿರುತ್ತೇವೆ. ಪ್ರಸ್ತುತ ನಮ್ಮ ಮನೆಯ ದಕ್ಷಿಣಕ್ಕೆ ನಾಗಪ್ಪ ಕಾಲೋನಿ ರಸ್ತೆ ಇರುತ್ತದೆ. ನಿಡಿ-*2* ರಲ್ಲಿನ ನಮ್ಮ ಸ್ವತ್ತು ಮತ್ತು ವಾದಿಯ ದಾವ ಎ ಸ್ವತ್ತು ಬೇರೆ ಬೇರೆ ಎಂದರೆ ಸರಿ. ನಿಡಿ-*17* ರಲ್ಲಿ *2*ನೇ ಪೋಟೋದಲ್ಲಿ ಎಡದಿಂದ ಮೊದಲಿಗೆ ಕಾಣುವ ಮನೆಯು ನಮ್ಮ ಚಿಕ್ಕಪ್ಪ ರಾಜಪ್ಪ ಬಿನ್ ಕಾಂಡ್ಯಪ್ಪನ ಮನೆಯಾಗಿದ್ದು, ಮಧ್ಯೆದಲ್ಲಿ ನಮ್ಮ ಮನೆಯಾಗಿದ್ದು, ನಂತರ ಸ್ನಾನದ ಮನೆ ಇರುತ್ತದೆ.

ಸದರಿ ರಾಜಪ್ಪ *2*ನೇ ಪ್ರತಿವಾದಿಯ ಮಗ ಎಂದರೆ ಸರಿ. ತಿಮ್ಮಕ್ಕನವರು ಲಕ್ಷ್ಮಮ್ಮನವರಿಂದ ಸ್ವತ್ತು ಖರೀದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಅವರು ಹೇಗೆ ಅಲ್ಲಿ ಸ್ವಾಧೀನಬಂದರೆಂದು ನನಗೆ ಗೊತ್ತಿಲ್ಲ. ನಿಡಿ-*2*ರ ಸ್ವತ್ತನ್ನು ನಾರಾಯಣ ಮತ್ತು ತಿಮ್ಮಕ್ಕ ಜಂಟಿಯಾಗಿ ಖರೀದಿಸಿರುತ್ತಾರೆಂದರೆ ಸರಿ. ಸದರಿ ನಿಡಿ-*2*ರ ಆಧಾರದ ಮೇಲೆ ನಾವು ಮತ್ತು ರಾಜಪ್ಪನವರು ಮನೆ ಕಟ್ಟಿರುತ್ತೇವೆಂದರೆ ಸರಿಯಲ್ಲ. ನಮ್ಮ ಮನೆಯನ್ನು *20* ಇಂಟು *40* ರಲ್ಲಿ ಕಟ್ಟಿದ್ದು, ಉಳಿದ್ದರಲ್ಲಿ ಸ್ನಾನದ ಮನೆ, ಕಾಂಪೌಡ್ ಇರುತ್ತದೆ. ರಾಜಪ್ಪನವರ ಮನೆ ನಮ್ಮ ಮನೆಯಷ್ಟೇ ವಿಸ್ತೀರ್ಣ ಇರಬಹುದು ಆದರೆ ನನಗೆ ಗೊತ್ತಿಲ್ಲ. ವಾದಿಯರ ಜಾಗದಲ್ಲಿ ನಾವು ಮತ್ತು ರಾಜಪ್ಪನವರು ಮನೆ ಕಟ್ಟಿದ್ದಕ್ಕಾಗಿ ಈ ದಾವೆ ಸಲ್ಲಿಸಿರುತ್ತಾರೆಂದರೆ ಸುಳ್ಳು. ನಿಡಿ-*18* ಮತ್ತು *19* ರಂತೆ ನಾವು ವಾದಿ, ಅವರ ಮಗ ಮತ್ತು

ಧನಂಜಯರವರ ಮೇಲೆ ನನ್ನ ತಂದೆ ದೂರು ನೀಡಿರುತ್ತಾರೆಂದರೆ ಸಾಕ್ಷಿಯು ನಮಗೆ ತುಂಬಾ ಕಿರುಕುಳ ನೀಡಿದ್ದಕ್ಕಾಗಿ ನೀಡಿರುತ್ತೇವೆಂದು ನುಡಿದಿರುತ್ತಾರೆ. ವಾದಿಯು ಸಹ ನಮ್ಮ ಮತ್ತು ನಮ್ಮ ತಂದೆಯ ಮೇಲೆ ದಿನಾಂಕಃ *06-08-2012* ರಲ್ಲಿ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸುಳ್ಳು ಆರೋಪ ಮಾಡಿ ನನ್ನ ತಂದೆ ವಾದಿಯ ಮೇಲೆ ದೂರು ನೀಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಸ್ವತ್ತು ಮತ್ತು ವಾದಿಯರ ಸ್ವತ್ತು ಬೇರೆ ಬೇರೆಯಾದರೂ ಸಹ ನಾವು ವಾದಿಯ ಸ್ವತ್ತಿಗೆ ತಕರಾರು ಮಾಡುತ್ತಿದ್ದೇವೆಂದರೆ ಸರಿಯಲ್ಲ. ನಮ್ಮ ಮನೆಯ ಅಸಸ್ ಮೆಂಟ್ ಆಗಿರುವುದಿಲ್ಲ. ಕಂದಾಯ ಪಹಣಿಯಲ್ಲಿ ನಮೂದಾಗಿರುತ್ತದೆ. ನಾವು ಖರೀದಿಸಿದ ನಿವೇಶನದ ನಕ್ಷೆ ಇದ್ದು, ಅದು ಈಗ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಅವರ ಅನುಕೂಲಕ್ಕಾಗಿ ನಕ್ಷೆ ಮಾಡಿಸಿರುತ್ತಾರೆಂದು ನುಡಿಯುತ್ತಾರೆ. ನಮ್ಮ ಸ್ವತ್ತಿನ ಚಕ್ಕುಬಂದಿ ರೆವಿನ್ಯೂ ನಕ್ಷೆಯಲ್ಲಿ ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಮಗೆ ಸ್ವತ್ತನ್ನು ಮಾರಿದವರಿಂದ ನಾವು ನಕ್ಷೆಯನ್ನು ಪಡೆದಿಲ್ಲ. ಇಂದೂ ಸಹ ನಾವು ಅನಧೀಕೃತ ವಾಗಿ ವಾದಿಯ *4* ಗುಂಟೆ ಸ್ವತ್ತಿನಲ್ಲಿ ಸ್ವಾಧೀನ ಹೊಂದಿರುತ್ತೇವೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**